**ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಕನಕಪುರ**

**ಸಿ.ಸಿ ನಂ. 131/2015**

ದಿನಾಂಕಃ. **09.07.2026** ರಂದು ಸಾಕ್ಷಿಗೆ ಬೆಳಗ್ಗೆ **11.40** ಗಂಟೆಗೆ ಪ್ರಮಾಣ ವಚನ ಭೋದಿಸಲಾಯಿತು.

| ಚಾಸಾ-**9** | ಪ್ರಾಸಾ-**8** |
|---|---|
| ಹೆಸರು | - ನಾಗಲಿಂಗಯ್ಯ |
| ತಂದೆ ಹೆಸರು | - ಕರಿಯಪ್ಪ |
| ವಯಸ್ಸು | - **42** |
| ಉದ್ಯೋಗ | - ವ್ಯವಸಾಯ |
| ವಿಳಾಸ | - ಕಪನೀಗೌಡನದೊಡ್ಡಿ |

**ಮುಖ್ಯವಿಚಾರಣೆ : ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರಿಂದಃ-**

ಸಾಕ್ಷಿ ಒಂದು ಪಂಚನಾಮೆಯನ್ನು ನೋಡಿ ಅದರಲ್ಲಿ ನನ್ನ ಸಹಿ ಇರುವುದಿಲ್ಲ. ಪೋಲಿಸರು ನನ್ನ ಸಮಕ್ಷಮ ಪಂಚನಾಮೆ ಮಾಡಿರುವುದಿಲ್ಲ ಮತ್ತು ಏನನ್ನೂ ವಶಪಡಿಸಿಕೊಂಡಿರುವುದಿಲ್ಲ.

ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ರವರು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ದಿ.**03.04.2014** ರಂದು ನನ್ನ ಹಾಗೂ ಚಾಸಾ-**8** ರವರ ಸಮಕ್ಷಮ ಪೊಲೀಸರು ನಿಪಿ- **8** ರ ಪ್ರಕಾರ ಸಾತನೂರು ಪೋಲಿಸ್ ಠಾಣೆಯಲ್ಲಿ ಬೆಳಗ್ಗೆ **9.45** ಗಂಟೆಯಿಂದ **10** ಗಂಟೆವರೆಗೆ ಪಂಚನಾಮೆ ಮಾಡಿ ಮದ್ಯವನ್ನು ವಶಪಡಿಸಿಕೊಂಡರು ಎಂದರೆ ಸರಿಯಲ್ಲ.

ಸಾಕ್ಷಿಗೆ ದಿಃ **03.04.2014** ರಂದು ಅವನು ಪೊಲೀಸರಿಗೆ ನೀಡಿದ ಎಂಬ ಹೇಳಿಕೆಯ ಭಾಗವಾದ "ದಿ**.03.04.2014…….**ಕ್ರಮ ಜರುಗಿಸಬೇಕು**",** ಓದಿ ಹೇಳಿದಾಗ ಅಲ್ಲಗಳೆದಿದ್ದರಿಂದ ಸದರಿ ಹೇಳಿಕೆ ಭಾಗವನ್ನು **ನಿಪಿ 11** ಎಂದು ಗುರುತಿಸಲಾಯಿತು**.**

ಆರೋಪಿಯೊಂದಿಗೆ ರಾಜಿ ಮಾಡಿಕೊಂಡಿರುವ ಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ**.**

**<u>ಪಾಟೀ ಸವಾಲು: ಆರೋಪಿ ಪರ ಶ್ರೀ.ಕೆ.ಎಂ.ಜಿ. ವಕೀಲರಿಂದಃ</u>**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರುವಿಚಾರಣೆ ಇಲ್ಲ.

**(**ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಬೆಳಗ್ಗೆ **11.45** ಗಂಟೆಯವರೆಗೆ ಪಡೆದುಕೊಂಡಿರುತ್ತೇನೆ ಎಂದು ಧೃಢೀಕರಿಸುತ್ತೇನೆ**)**

ಓದಿ ಹೇಳಿ ಕೇಳಿ ಸರಿ ಇದೆ**,**

**ಮೂರನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ., ಕನಕಪುರ.**